# ನೀರು ಬಾಯಾರಿದಾಗ...

ಎಷ್ಟೊಂದು ಜನರ ಬಾಯಾರಿಕೆ
ಹಿಂಗಿಸಿರಬಹುದೋ ಈ ನೀರು
ನನಗಿಂತ ಮುಂಚೆ
ನನಗೆ ಗೊತ್ತಿಲ್ಲ

ಮತ್ಯಾರ ಬಾಯಾರಿಕೆ ಹಿಂಗಿಸಲಿದೆಯೋ
ನನ್ನ ನಂತರ
ಅದೂ ಗೊತ್ತಿಲ್ಲ


ಅದೇಸು ದಿವಸದಿಂದ ಕನವರಿಸುತ್ತಿದ್ದವೊ
ಈ ಆದಿಮ ಬಂಧುವಿಗಾಗಿ
ನನ್ನ ಕಣ್ಣಗಳು
ನನಗೂ ತಿಳಿಯುತ್ತಿಲ್ಲ

ಈ ಪುರಾತನ ನೀರನು ಮುಟ್ಟುವೆ
ಮುಡಿಯುವೆ ಕುಡಿಯುವೆ
ಸುರಿಯುವೆ

2
ನೆತ್ತಿ ಮ್ಯಾಗಿನನೀರು
ನೆಲದ ನೀರು
ಅಂತರ್ಜಲದ ನೀರು
ಆಕಾಶದ ನೀರು
ಬಿಸ್ಲೇರಿ ಬಾಟಲಿ ನೀರು
ಕಣ್ಣಾಗಿನ ನೀರು

ಈ ನೀರ ದಾಹಗಳೇಸೊ
ಅದರ ಅವತಾರಗಳೇಸೊ

ಈ ನಿತ್ಯ ನೂತನ ನೀರಿಗೆ
ಮಡಿ ಮೈಲಿಗೆಯಂತೂ ಮೊದಲೇ ಇಲ್ಲ
ಗಡಿ ದೇಶಗಳಂತೂ ಅರ್ಥವಾಗುವುದಿಲ್ಲ
ಆದರೂ ಈ ಲೋಕದಾಗ ಮುಗಿಯೊದಿಲ್ಲ
ನೀರಕದನ



3
ನೀರೆಂದಿಗೂ ಮುಗಿಯದ ಹುಚ್ಚು
ತಳವಿರದ ಬಾವಿಗೆ ಬಿದ್ದ ಮಹಾಸ್ವಪ್ನ
ಇದೊಂದು ನಿಗೂಢ ನುಡಿ
ಆದಿಮ ಕಿಚ್ಚು
ಭೂತ ನರ್ತನ

ಒಡೆದರೂ ಒಡುಪಾಗಿ ಉಳಿವ ಲಯ
ಮಾತಿಗೂ ಮೊದಲೇ ಮುಗಿವ ಮೌನ
ಮೌನಕೂ ಮೊದಲೇ ಬೆಳೆವ ಧ್ಯಾನ
ಧ್ಯಾನಕೂ ಮೊದಲೇ ಹೊಳೆವ ಗ್ಯಾನ
ಗ್ಯಾನಕೂ ಮೊದಲೇ ಇರುವ ಇನ್ನೇನೋ?